Regd No B G 155 Sri

(76) 2

22—4—1965

ಸತ್ಯವಾದಿ

48 th Year

Satyavadi

DAILY

MYSOR 4

ಸಂಸ್ಥಾಪಕರು — ಆಂಮನೆ ಸುಬ್ಬೇದಾಸ್ ಎಂ ಏ ಶುಬ್ಬರಾಯುಲು ॥ ಸಂಪಾದಕರು — ಧರ್ಮಪ್ರಚಾರಿಣಿ ಎಂ ಎಸ್. ಕೃಷ್ಣಂಭವ್ ಬೆಲೆ 2ಪೈಸೆ

ಬಾನುವಾರ ರಾತ್ರಿ ಹೈಕೋರ್ಟು ನಡೆಯಿತು

ಪಾಟ್ನಾದಿಂದ ಬಂದಿರುವ ವಾರ್ತೆ: ಪಾಟ್ನಾ ಕಾಲೇಜಿನ ಪ್ರಿನ್ಸಿಪಾಲರು ಶ್ರೀ ಕೆ. ವಿ. ಕಾರ್ಮಿಕ ಎಂಬ ಯುವಕನ ಹೆಸರನ್ನು ಪರೀಕ್ಷೆಗೆ ಕಳುಹಿಸಲಾಗಿದ್ದ ವಿದ್ಯಾರ್ಥಿಗಳ ಪಟ್ಟಿಯಿಂದ ಹೊಡೆದುಹಾಕಿದ್ದರು. ಇದರ ಕುಲಪತಿಯಲ್ಲಿ ಮಾಡಿದ ಮನವಿಯೂ ವಿಫಲವಾಯಿತು. ಭಾನುವಾರ ರಾತ್ರಿ ವಿದ್ಯಾರ್ಥಿಯು ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ನರಸಿಂಹ ಮಂದರ್ ಅವರ್ಜಿ ಸಲ್ಲಿಸಿ ಪರೀಕ್ಷೆ ಮಾಡಿನ ದಿನ ಸೋಮವಾರ ಪ್ರಾರಂಭ ವಾಗುವುದೆಂದೂ ಅವನ್ನು ಕಳೆದುಕೊಂಡರೆ 1 ವರ್ಷ ನಷ್ಟವಾಗುವುದೆಂದೂ ವಿನಂತಿಸಿದರು. ಅವರ ರಿಟ್ ಅರ್ಜಿಯನ್ನು ಕೂಡಲೇ ಒಂದ ಡಿವಿಜ್ ಬೆಂಚು ಪರಿಶೀಲಿಸಿ ವಿದ್ಯಾರ್ಥಿ ಪರೀಕ್ಷೆಗೆ ಕೂಡುವಂತೆ ಆಜ್ಞೆ ಮಾಡಿದರು. ಅರ್ಜಿ ವ್ಯವಸ್ಥೆ ಮಾಡಿಲಾಗುವುದು ಅರ್ಜಿದಾರ ಎ. ಎ ಪಾರ್ಟ್ 1 ಕ್ಕೆ ಕುಳಿತಿದ್ದರು. ಪಾಟ್ನಾ ಹೈಕೋರ್ಟಿನ ಇತಿಹಾಸದಲ್ಲೇ ಪ್ರಪ್ರಥಮವಾಗಿ ಭಾನುವಾರ ರಾತ್ರಿ ಕೋರ್ಟು ನಡೆಸಲಾಯಿತು.

❁

ಪಾನ ನಿರೋಧಕ್ಕೆ ಶಕ್ತಿ ಸೇರು

ಮೈಸೂರು — ಜಿಲ್ಲಾ ಪಾನನಿರೋಧ ತಂಡದವರು ಸೋಮವಾರ ದೇವರಾಜ ಮೊಹಲ್ಲಾ ಲಕ್ಷ್ಮಮ್ಮನಂಬುವವಳ ಮನೆಯಲ್ಲಿ 350 ಡ್ರಾಂ ಐ ಡಿ ಲಿಕ್ಕರ್ ವಶಪಡಿಸಿಕೊಂಡು ಅವಳ ಮೇಲೆ ಮೊಖದ್ದಮೆ ಹಾಕಿದರು; ಮಾಜಿಸ್ಟ್ರೇಟರು ಅಕೆಗೆ ರೂ 500 ಜುಲ್ಮಾನೆ ವಿಧಿಸಿದರು.

❁

ಭೂಕಂದಾಯ ಮಸೂದೆ

ಬೆಂಗಳೂರು — ಭೂಕಂದಾಯ ತಿದ್ದುಪಡಿ ಮಸೂದೆಯು ಮೊನ್ನೆ ಶಾಸನಸಭೆಯಲ್ಲಿ ಮಂಜೂರಾಯಿತು.

ಸೌಂಸಭೆ

ಮೈಸೂರು — ಮುನಿಸಿಪಲ್ ಆಕ್ಟ್ ಸಂಬಂಧಿಸಿದ ವಿಷಯಗಳನ್ನು ಪರಾಮರ್ಶೆ ಲೋಚಿಸಲು ಸೌಂಸಭೆಯ ವಿಶೇಷ ವಿಂಗ್ ಶನಿ ॥ 26 ಸೋಮವಾರ ಮಧ್ಯಾಹ್ನ ನಡೆಯಲಿದೆ.

❁

ಕೇಂದ್ರ ಆಹಾರ ಸಂಶೋಧನಾಲಯದಲ್ಲಿ

ಮೈಸೂರು — ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ಮಂಗಳವಾರ ಅಂತರಾಷ್ಟ್ರೀಯ ಆಹಾರ ಸಂಶೋಧನಾ ತರಬೇತಿ ಕೇಂದ್ರವನ್ನು ಉದ್ಘಾಟಿಸಿ ಶಾ., ರಾಜ್ಯಪಾಲರಾದ ಶ್ರೀ ವಿ ವಿ ಗಿರಿ ಇವರು— ದೇಶದ ಆಹಾರ ಸಂಶೋಧನೆಯು, ಈಗಿನ ಸೌಕರ್ಯಗಳಿಂದ ದೇಶದಲ್ಲಿ ಉತ್ಪಾದಿಸಲಾಗುತ್ತಿರುವ ಆಹಾರವನ್ನು ಸರಿಯಾಗಿ ಪೋಲಾಗದಂತೆ ಇಟ್ಟು ಸಾರ್ವಜನಿಕರಿಗೆ ಹೇಗೆ ಒದಗಿಸಬಹುದೆಂಬ ಬಗ್ಗೆ ನಿಯಮ ಕಂಡುಹಿಡಿಯಬೇಕೆಂದು ಹೇಳಿದರು.

ಬೆಂಗಳೂರು — ಪೆಟ್ರೋಮೆಂಟು ಕಾರ್ಪೊರೇಷನ್ ಮತ್ತು ವಾಟರ್ ಕೇಟ್ ಬಗ್ಗೆ ಸರಕಾರಕ್ಕೆ ರೂ 140 ಲಕ್ಷ ಬಾಕಿ ಬರಬೇಕೆಂದು ಮೊನ್ನೆ ಶಾಸನಸಭೆಯಲ್ಲಿ ತಿಳಿಸಲಾಯಿತು.

★

ಕೊಚ್ಚಿ — ಕಚ್‌ನಲ್ಲಿ ವ್ಯಾಜ್ಯಗತವಾಗಿರುವ ಗಡಿ ವಿಷಯದಲ್ಲಿ ಭಾರತ ಬಲಪ್ರಯೋಗಮಾಡಿದರೆ, ಅದರ ತೀವ್ರ ಪರಿಣಾಮಕ್ಕೆ ಅದೇ ಹೊಣೆಗಾರಿಯೆಂದು ಪಾಕಿಸ್ತಾನವು ಎಚ್ಚರಿಕೆ ತಿಳಿಸಿದೆ.

★

ಸಾಳೆಯಕ್ಷಸಂಚಾರಂಗ

ದೈವಜ್ಞ ಶಿರೋಮಣಿ

ಆಸ್ಥಾನಮಹಾವಿದ್ವಾನ್ ಧರ್ಮಾಧಿಕಾರಿ

ಗಣಕಕಾರ್ಯಾಧಿಕ್ಷ, ಜ್ಯೋತಿರ್ವಿದ್ಯಾನಿಧಿ

ಪಂಪಶ್ರೀ ಕೃಷ್ಣಜೋಯಿಸರಿಂದ

ತಕ್ಷಕ್ಷಣವಾ ಸಮಸ್ತ ಉತ್ಪಾತಾಷ್ಟ

ಗೆಜ್ಜಲಿಂದ ಲಕ್ಷಾಂತರ ರೂ. ನಷ್ಟ

❁

ಬೆಂಗಳೂರು — ಕಾಲರಾ ಹಾಂಡುವುದನ್ನು ತಡೆಗಟ್ಟಲು ಹೋಟೆಲು ಮತ್ತು ಸಿನಿಮಾ ಮಂದಿರಗಳನ್ನು ಬಂದ್ ಮಾಡಬೇಕೆಂದು ಮೊನ್ನೆ ಕಾರ್ಪೊರೇಷನ್ ಮೀಟಿಂಗಿನಲ್ಲಿ ಸದಸ್ಯರು ಹೇಳಿದರು.

★

ನವದೆಹಲಿ — ಜೆಕೊಸ್ಲೊವೇಕಿಯಾದ ಸಂಕಾರಿ ಕಾರ್ ಕಂಪೆನಿಯವರೇ ಭಾರತ-ಸಂಕಾಂದೊಡನೆ-ಸಹಕರಿಸಿ ಪ್ರತಿ ವರ್ಷಕ್ಕೆ 25 ಸಾವಿರದಿಂದ 30 ಸಾವಿರ ಕಡವೆ ಜಿಲಿ ಕಾರನ್ನು ತಯಾರಿಸುವುದಾಗಿ ತಿಳಿಸಿದ್ದಾರೆ.

★

ಪಾಟ್ನಾ — ಬಿಹಾರಾ ವಿಧಾನ ಸಭೆಯ ನಿಲ್ವಾಣದಲ್ಲಿ ಚೀನಾ ಗೂಢಚಾರಿಗಳೆಂಬ ಸಂಶಯದ ಮೇಲೆ ಮೂರು ಜನರು ಬಂಧಿಸಲ್ಪಟ್ಟರು.

ಅತ್ಯವಸರದ ಪರಿಸ್ಥಿತಿ

ಕೇಂದ್ರ ಸರಕಾರದ ಉದ್ಯೋಗಸ್ಥರಿಗೊಮ್ಮೆ ಆಶೆ ತೋರಿಸಿ ಕಾಂಗ್ರೆಸ್ಸು ವಂತಿಪುಂಡಲವು ಮತ್ತೆ ನಿರಾಶೆಯನ್ನುಂಟುಮಾಡಿತು: ಅವರಿಗೆ ಪ್ರತೀ ತಿಂಗಳಲ್ಲಿ ದ್ವಿತೀಯ ಶನಿವಾರ ರಜವಿದೆ: ಅದರೊಂದಿಗೆ ಇನ್ನೊಂದು ಶನಿವಾರವನ್ನು ರಜಾದಿನವೆಂದೂ ಅಥವಾ ಎಲ್ಲಾ ಶನಿವಾರಗಳನ್ನೂ ಅರ್ಧ ದಿನ ಕೆಲಸದ ದಿನಗಳನ್ನಾಗಿ ಅಥವಾ ಪ್ರತೀದಿನ ಹಳಿಗಾಲದಲ್ಲಿ ಕಾರ್ಯಾಲಯಗಳನ್ನು ಇದು ಗಂಟೆಗೇನೇ ಮುಚ್ಚಲಾಗುವುದೆಂದೂ, ಅದನ್ನು ಅರಿಸಿಕೊಳ್ಳುವ ಜವಾಬ್ದಾರಿಯನ್ನು ಶಿಕ್ಷಕ ಸಂಘಗಳಿಗೆ ವಹಿಸಿ ವುದಾಗಿ ಪತ್ರಿಕೆಗಳಲ್ಲಿ ಸಮಾಚಾರ ಬಂದಿತ್ತು: ಅದು ತೀರ್ಮಾನಗೊಂಡು ಯಾವ ಶನಿವಾರವನ್ನು ರಜಾದಿನವೆಂದು ಘೋಷಿಸುವ ಪ್ರಶ್ನೆ ಮಾತ್ರ ಉಳಿದಿದೆಯೆಂಬ ಸುದ್ದಿಯೂ ಪ್ರಕಟವಾಯಿತು; ಸರಕಾರೀ ಉದ್ಯೋಗಸ್ಥರು ಆಶೆಯಿಂದ ಎದುರುನೋಡುತ್ತಿದ್ದಾಗ ನಿರಾಶೆಯ ಚಂಡವಾರುತ ಡಿಲ್ಲಿಯಿಂದ ಬಂತು: ಅತ್ಯವಸರದ ಇಂದಿನ ಪರಿಸ್ಥಿತಿಯಲ್ಲಿ ಯಾವ ತೀರ್ಮಾನ ಕೈಗೊಳ್ಳಲೂ ಸಾಧ್ಯವಿಲ್ಲವೆಂದು ಸರಕಾರ ತಿಳಿಸಿತು; ಅತ್ಯವಸರದ ಪರಿಸ್ಥಿತಿಯಲ್ಲಿ ಉದ್ಯೋಗಸ್ಥರಿಂತೂ ಬಾಯಿಬಿಡಲು ಸಾಧ್ಯವಿರುವುದಿಲ್ಲ; ಸರ್ವಕ್ಷಣ

23-4-65
No Issue

ಕಾನೂನಿನ ಖಡ್ಗ ಅವರ ತಲೆಯ ಮೇಲೆಯೇ ಇದೆ ; ಅದುದರಿಂದಲೊ ಏನೊ ಎಲ್ಲಿಂದಲೂ ಈ ಘಟನೆಗೆ ಪ್ರತಿಕ್ರಿಯೆ ಕಂಡುಬರಲಿಲ್ಲ : ಕಾರ್ಮಿಕ ಸಂಘಗಳಾದರೋ ಕಾಂಗ್ರೆಸಿಗರ ಕೈಯೊಳಗೇನೇ ಇವೆ.

ಈ ಅತ್ಯಾಚಾರದ ಪರಿಸ್ಥಿತಿ ಇರುವುದಾದರೂ ಎಲ್ಲಿ ?

ಪಾರಾಷ್ಟ್ರಗಳಲ್ಲಿ ಭಾರತದ ಪ್ರತಿನಿಧಿಯಾಗಿದ್ದು, ಭಾರತದಲ್ಲಿ ರಾಜ್ಯ ಪಾಲಿಕೆಯಾಗಿದ್ದ ಶ್ರೀಮತಿ ವಿಜಯಲಕ್ಷ್ಮಿಯವರು ಈ ಪ್ರಶ್ನೆಗೆ ಸಮರ್ಪಕ ಉತ್ತರವಿತ್ತಿದ್ದಾರೆ : ಅವರು ಲೋಕಸಭೆಯಲ್ಲಿ ಮಾತನಾಡುತ್ತ, ಅದನ್ನು ತಿಳಿಸಿದರು : ದೇಶದಲ್ಲಿಂದೆಲ್ಲೂ ಅತ್ಯವಸರದ ಅಥವಾ ಅಪಾಯದ ಅರಿವು ಕಂಡುಬರುವುದಿಲ್ಲ : ಭಾರತದ ಜನಸಂಖ್ಯೆಯ ಒಳಗೆ ಹಾಗೂ ಹೊರಗೆ ಎಲ್ಲರೂ ಸಾಧಾರಣ ರೀತಿಯಲ್ಲೆ ವರ್ತಿಸುತ್ತಿದ್ದಾರೆ ; ಅತ್ಯವಸರದ ಪರಿಸ್ಥಿತಿ ಎಲ್ಲಿಯೂ ಇಲ್ಲ....

ಇದನ್ನು ಜನರು ಸಂಬಳ, ಕವಿ ಕೆಲಸಕ್ಕಾಗಿ ಬ್ರಂಬಡ ಬಡಿಯುತ್ತಿರುವ ನೌಕರಂಗಲೀ, ನಾಲ್ಕಾಣೆಯ ರಾಜಕೀಯ ಉದ್ಯಮಿಯಾಗಲೀ, ಬೊಗಳವ ನಾಯಿಯಾಗಲೀ ಹೇಳಿರುವುದಲ್ಲ ; ಜವಾಬ್ದಾರಿಯ ಅನುಭವವಿದ್ದವರೇ ಹೇಳಿರುವದಿಲ್ಲ : ಜವಾಬ್ದಾರಿಯ ಅನುಭವವಿದ್ದವರೇ ಹೇಳಿದ್ದಾರೆಂದಮೇಲೆ ಅದಕ್ಕೆ ಬೆಲೆ ಇದ್ದೇ ಇದೆ : ಅದನ್ನು ಅಲ್ಲಗಳೆಯಲು ಸಾಧ್ಯವೇ ಇಲ್ಲ.

ಭಾರತದ ಸಮಸ್ತದಲ್ಲಿ ಕಂಡುಬರದ ಅತ್ಯವಸರದ ಪರಿಸ್ಥಿತಿ ಕೇಂದ್ರ ಸರಕಾರದ ನೌಕರರಿಗೆ ಮಾತ್ರ ಏಕೆ ? ಸರಕಾರ ಅವರಿಗೂ ಅದೇಶಕ್ಕೆಂದಿಷ್ಟು ಸಲುಗೆಯನ್ನು ತೋರಿಸಬಾರದು : ಅತ್ಯವಸರದ ಪರಿಸ್ಥಿತಿಯೆಂದು ಹೇಳಿ ಅವರ ತಿಂಗಳ ಸಂಬಳವನ್ನು ಏದೂವರೆ ಘಂಟೆಯಾದರೂ ಮುಂದುವರಿಸಿರುವುದನ್ನು ಅದೇಕೆ ಈಗ ಕಿತ್ತುಕೊಳ್ಳಬಾರದು ?

ಇಂದಿನ ಅತ್ಯವಸರದ ಪರಿಸ್ಥಿತಿಯಲ್ಲಿ ಸರಕಾರೀ ಉದ್ಯೋಗಸ್ಥರು ಅದನ್ನು ಕೇಳುವಂತಿಲ್ಲ ; ಅದರ ಸಂಘಗಳಾದರೋ ಕಾಂಗ್ರೆಸ್ ಶಬ್ದಗಳಿಂದ ತುಂಬಿ ಹೋಗಿವೆ ; ಹಾಗಿದ್ದರೂ ಅವೀಗ ತಮ್ಮ ಅಸ್ತಿತ್ವವನ್ನು ಬೇರೆ ವಿಧದಲ್ಲಿ ಪ್ರಕಟಿಸಲಾರಂಭಿಸಿದ್ದಾರೆ ; ಅದರ ವಿಷಯವನ್ನು ಕೇರಳದಲ್ಲಿ ಮಾಡಿ ತೋರಿಸುವಾಗ.

— ಶಿವಶಂಕರ್

[ಶ್ರೀ ಶಿವಶಂಕರ್‌ರವರ ' ಗೋಸಂವರ್ಧನವೋ ಗೋಸಮ್ಮರ್ದನವೋ ' ಎಂಬ ಲೇಖನವು ' ಗೋರಕ್ಷಣ ' ದಲ್ಲಿ ಪ್ರಕಟಿಸಲಾಗುವುದು.

ಸಮಯೋಚಿತ ಸೂಕ್ತಿಗಳು

ವೇಗವು ಗುದುರೆಯ ಲಕ್ಷಣ, ಮದವು ಆನೆಯ ಲಕ್ಷಣ, ಚಾತುರ್ಯವು ಹೆಂಗಸಿನ ಲಕ್ಷಣ, ಉಡ್ಡೋಗವು ಪುರುಷ ಲಕ್ಷಣ.

೦ ೦ ೦

ಇವನು ತನ್ನವ-ಪರವನೆಂಬ ಗಣನೆಯು ಅಲ್ಲವುತಿಗೆ ವೊತ್ತ : ಉದಾರವಾದ ನಡತೆಯುಳ್ಳವರಿಗೆ ವ್ಯಪಜಿವೇ ಕುಟುಂಬವಾಗಿರುತ್ತದೆ.

Help The Gorakshana

★

" ಗೋರಕ್ಷಣ " ಕ್ಕೆ ಜೊಂಬಲಿಸಲಾಗಿದೆ

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಲಭಿಸುತ್ತಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ, ವಾಣಿಜ್ಯ, ಕೃಷಿ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ.

ವಾರ್ಷಿಕ ಚಂದಾ 50 ನೈಸೆ ; ' ಗೋರಕ್ಷಣ ' ಕ್ಕೆ ಲೇಖನಗಳನ್ನೂ, ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ- ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

ವುಡ್‌ಲಾಂಡ್ ಅಮೋಘ 4ನೇ ವಾರ

ಬೊಂಬಾಯಿನಲ್ಲಿ ಲಕ್ಷಾಂತರ ಜನ ನೋಡಿ ಮುಕ್ತ ಕಂಠದಿಂದ ಹೊಗಳುತ್ತಿರುವ

ಅತ್ಯಮೋಘ ಹಿಂದಿ ಚಿತ್ರ ರತ್ನ

ಬಹು ಬೇಟಿ ★ Bahu Beti

ನಾಯಕ- ಅಶೋಕಕುಮಾರ್, ನಾಯಕಿ- ಮೀನಾಕುಮಾರಿ, ಜಾಯ್ ಮುಖರ್ಜಿ, ಮುಮ್ತಾಜ್

ಪ್ರತಿದಿನ 3 ಪ್ರದರ್ಶನಗಳು

ಅಪೆರಾ— 23-4-65 ರಿಂದ

ಅಮೋಘ ತೆಲುಗು ಚಿತ್ರ — ದಿನ 3 ಆಟಗಳು

ರಾಮದಾನು

ಕಾಂತಾಗಣ— ನಾಗಯ್ಯ, ಕನ್ನಾಂಬಾ

SHAKTI

SUDHA

A Superb Tonic



ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಬ್ಬಾಗಿ ನಡೆಯಲಿ

Edited, Printed & Published by the Proprietor
Dharma Prachara Nirata M S Krishna Rao
at the Satyavadi Press Camaraajapuram Mysore 4